ಯೂರೋಪ್, ಅಮೆರಿಕಾ ದೇಶಗಳಲ್ಲಿ ವಿಜ್ಞಾನ, ತಂತ್ರಜ್ಞಾನಗಳು ಈ ರೀತಿಯ ಬೆಳವಣಿಗೆಯನ್ನು ಕಂಡಿವೆ. ಅದರಿಂದ ಆಧುನಿಕತೆ, ಯಂತ್ರಜಗತ್ತು ನಿರ್ಮಾಣವಾಗಿವೆ. ರೈಲು, ಮೋಟಾರ್ ಗಾಡಿ, ಟೆಲಿಫೋನ್, ಕಂಪ್ಯೂಟರ್, ಇಂಟರ್ನೆಟ್ ಎಲ್ಲವೂ ಬಂದಿವೆ. ಇದರೊಂದಿಗೆ ಬೃಹತ್ ಉದ್ದಿಮೆಗಳು, ಕಾರ್ಖಾನೆಗಳು, ವ್ಯಾಪಾರ ವಹಿವಾಟು ವೃದ್ಧಿಯಾಗಿವೆ. ಮಾನವನಲ್ಲಿ ಸ್ವಾರ್ಥಬುದ್ಧಿ, ದುರಾಸೆ, ಶ್ರೀಮಂತಿಕೆಯ ಬಯಕೆ, ಕೊಳ್ಳುಬಾಕ ಸಂಸ್ಕೃತಿ, ಹಿಂದೆಂದೂ ಕಂಡರಿಯದ 'ಕತ್ತುಕೊಯ್ಯುವ ಪೈಪೋಟಿ' (cut-throat competition) ಇವೆಲ್ಲ ಹೊಸದಾಗಿ ಮೂಡಿಬಂದಿವೆ. ಮಾನವೀಯತೆ ಇಲ್ಲದ ಜೀವನ ಪರಿಸ್ಥಿತಿ ನಿರ್ಮಾಣವಾಗಿದೆ. ಯಂತ್ರಜಗತ್ತಿನ ವೈಭವಕ್ಕೆ ಮರುಳಾಗಿ, ಮಾನವನು ತನ್ನ ಸ್ವಾತಂತ್ರ್ಯ, ನೆಮ್ಮದಿ, ಶಾಂತಿಗಳನ್ನು ಕಳೆದುಕೊಂಡಿದ್ದಾನೆ.

ಇವೆಲ್ಲ ಬದಲಾವಣೆಗಳಿಗೆ ಮಾನವನ ಬೌದ್ಧಿಕ ವಿಕಾಸವೇ ಕಾರಣ ಎನ್ನಲಾಗದು; ಪ್ರಾಚೀನ ಕಾಲದಿಂದಲೇ ಭಾರತದಲ್ಲಿ ಜ್ಞಾನದ ವಿಕಸನ ನಡೆಯುತ್ತ ಬಂದಿತ್ತು. ನಳಂದ, ತಕ್ಷಶಿಲೆಗಳಂಥ ವಿಶ್ವವಿದ್ಯಾಲಯಗಳೇ ಇಲ್ಲಿ ತಲೆಯೆತ್ತಿದ್ದವು. ಆಗ ಯೂರೋಪ್ ಇನ್ನೂ ಆದಿಮ ಸಂಸ್ಕೃತಿ, ಅನಾಗರಿಕ ಬದುಕನ್ನು ಬದುಕುತ್ತಿತ್ತು. ಭಾರತದಲ್ಲಿ ಬೌದ್ಧಿಕ ಬೆಳವಣಿಗೆಯೆಲ್ಲವೂ ಆಂತರಿಕ ಶೋಧದಿಂದ, ಆಧ್ಯಾತ್ಮಿಕ ಅರಿವಿನಿಂದ ಅಸಾಧಾರಣ ಪ್ರಭಾವವನ್ನು ಪಡೆದಿತ್ತು. ಆದ್ದರಿಂದ ಇಲ್ಲಿನ ಬೌದ್ಧಿಕ ಅನ್ವೇಷಣೆಯೆಲ್ಲವೂ ಬಾಹ್ಯ ಜಗತ್ತಿಗಿಂತ ಹೆಚ್ಚಾಗಿ ಆಂತರಿಕ ಜಗತ್ತಿನೆಡೆಗೆ ಹರಿಯಿತು ಎನ್ನಬೇಕು. ಈ ಕಾರಣದಿಂದ ಇಲ್ಲಿ ಯೋರೋಪ್‌ನಲ್ಲಿ ಕಂಡ ವಿಜ್ಞಾನದ ಅಭೂತಪೂರ್ವ ಬೆಳವಣಿಗೆ ಕಂಡುಬರಲಿಲ್ಲ; ಆದರೆ ಅಲ್ಲೆಲ್ಲೂ ಕಾಣದ ಅಸಾಧಾರಣ ಆಧ್ಯಾತ್ಮಿಕ ಉನ್ನತಿ ಇಲ್ಲಿ ಕಂಡು ಬಂತು. ನಮ್ಮಲ್ಲಿ ಬೆಳೆದು ಬಂದ ನೈತಿಕ, ಆಧ್ಯಾತ್ಮಿಕ ಮೌಲ್ಯಗಳ ಅಡಿಪಾಯವನ್ನು ಆಧರಿಸಿದ ಜೀವನಶೈಲಿ ಪಾಶ್ಚಾತ್ಯರಲ್ಲಿ ಉಂಟಾಗಲಿಲ್ಲ. ಈ ಕಾರಣದಿಂದ ಅಲ್ಲಿ ಧರ್ಮ, ಆಧ್ಯಾತ್ಮಿಕತೆಗಳು ಆಧುನಿಕ ವಿಜ್ಞಾನ ತಂತ್ರಜ್ಞಾನದ ವಾದಸರಣಿಗಳನ್ನು ಎದುರಿಸಲಾಗದೆ ಹೋದವು. ಆಧುನಿಕ ವಿಜ್ಞಾನ, ತಂತ್ರಜ್ಞಾನಗಳ ಬೌದ್ಧಿಕ ಹೊಡೆತಗಳನ್ನು ಎದುರಿಸಿಯೂ ಇಲ್ಲಿನ ಆಧ್ಯಾತ್ಮಿಕ, ಧಾರ್ಮಿಕ ಆದರ್ಶಗಳು ಇನ್ನಷ್ಟು ಭದ್ರ ಬುನಾದಿಯ ಮೇಲೆ ನಿಲ್ಲುವುದು ನಮ್ಮ ದೇಶದಲ್ಲಿ ಸಾಧ್ಯವಾಯಿತು.

### ಬದಲಾದ ಜಗತ್ತು , ಶಾಶ್ವತ ಸತ್ಯ

ಇತ್ತೀಚೆಗೆ ನಮ್ಮ ಬದುಕು ಎಷ್ಟೊಂದು ಕ್ಷಿಪ್ರಗತಿಯಲ್ಲಿ ಬದಲಾಗುತ್ತಿದೆಯೆಂದರೆ, ಮೊದಲು ಶತಮಾನಗಳಲ್ಲಿ ಬದಲಾವಣೆಯನ್ನು ಅಳೆಯುತ್ತ, ಬಳಿಕ ದಶಕಗಳಲ್ಲಿ ಅಳೆಯುತ್ತ, ಇತ್ತೀಚೆಗೆ ಒಂದೊಂದು ವರ್ಷಗಳಲ್ಲಿ ಆಗಿರುವ ಬದಲಾವಣೆನ್ನು ಅಳೆಯುತ್ತ ಬರುತ್ತಿದ್ದೇವೆ. ಕಾಲಮಾನದ ಘಟಕಗಳೇ ಹೀಗೆ ವೇಗವಾಗುತ್ತ ಬರುತ್ತಿವೆ! ಆದರೆ ಇಷ್ಟು ವೇಗವಾಗಿ ಉಂಟಾಗುವ ಬದಲಾವಣೆಗಳನ್ನು ಮಾನವನಿಗೆ ಸಹಿಸಿಕೊಳ್ಳಲಾಗುವುದೆ? ಇಲ್ಲವೆಂದೇ ಹೇಳಬೇಕು.

ಸಮಾಜ ಜೀವನದ ರೀತಿನೀತಿಗಳು ಎಲ್ಲೆ ಮೀರಿಹೋದಾಗ ಮಾನವನು ತತ್ತರಿಸುತ್ತಾನೆ. ಈಗಿನ ಸಂಕೀರ್ಣ ಬದುಕು ಇಂಥ ಚಿತ್ರಗಳನ್ನೇ ತೋರಿಸುತ್ತಿದೆ. ಹತಾಶೆಯಿಂದ ನಾವು, 'ಜೀವನ ಇಷ್ಟೊಂದು ಬದಲಾಗಿ ಹೋಯಿತಲ್ಲ!' ಎನ್ನುತ್ತೇವೆ. ಹಲವು ಕ್ಷೇತ್ರಗಳಲ್ಲಿ ಉಂಟಾಗಿರುವ ಉತ್ತಮ ಸುಧಾರಣೆಗಳನ್ನು ನಾವು ಸ್ವಾಗತಿಸುವುದು, ಸ್ವೀಕರಿಸುವುದು ಸಹಜ. ಆದರೆ ಅನೇಕ ಅನಗತ್ಯ, ಹಾನಿಕಾರಕ ಬೆಳವಣಿಗೆಗಳನ್ನು ನಿಯಂತ್ರಿಸಲಾಗದೆ, ಎಲ್ಲವೂ ನಮ್ಮ ಕೈತಪ್ಪಿ ಹೋಗಿ, ಮಿತಿಮೀರಿದಾಗ 'ಅಯ್ಯೋ-ಹೀಗಾಗಬಾರದಾಗಿತ್ತು!' ಎಂದು ಪ್ರತಿನಿತ್ಯ ಗೋಳಾಡುವ ಅನೇಕ ಸಂದರ್ಭಗಳು ಈಗ ಎದುರಾಗುತ್ತಿವೆ. ದೂರದೂರದ ಜನರು ಮಾತನಾಡಲು ಅತ್ಯುತ್ತಮ ಮಾಧ್ಯಮವಾಗಿ ನಮ್ಮ ಬಳಿಗೆ ಬಂದ 'ದೂರವಾಣಿ'ಯನ್ನು ನಾವು ತುಂಬು ಹೃದಯದಿಂದ ಸ್ವಾಗತಿಸಿದೆವು. ಆದರೆ ಅದೇ 'ಮೊಬೈಲ್' ಫೋನಿನಿಂದಾಗಿ ಲಕ್ಷಾಂತರ ಹಣವನ್ನು ಕಳೆದುಕೊಳ್ಳುವ ಪ್ರಸಂಗ ಬಂದಾಗ ಅದನ್ನು ಜೀರ್ಣಿಸಿಕೊಳ್ಳುವುದು ನಮಗೆ ಅಷ್ಟೇ ಕಷ್ಟವಾಗುತ್ತದೆ.

ಹಲವು ಪ್ರಶ್ನೆಗಳಿಗೆ, ಸಮಸ್ಯೆಗಳಿಗೆ ಪರಿಹಾರವೇ ಇಲ್ಲ ಎಂದು ನಾವು ಭಾವಿಸುತ್ತೇವೆ. ಆದರೆ ಉತ್ತರ ನಮ್ಮಲ್ಲೇ ಇದೆ; ನಮ್ಮ ಅಂತರಂಗದಲ್ಲೇ ಇದೆ : ನಾವು ಮಾನವರಾಗುವುದು ಆಕಾಶಕ್ಕೆ ನೆಗೆಯುವ ಮೂಲಕ ಅಲ್ಲ, ಮಣ್ಣಿಗೆ ಮರಳುವ ಮೂಲಕ. ಗಗನಚುಂಬಿ ಕಟ್ಟಡದಲ್ಲಿ ವಾಸಿಸುವ ಮೂಲಕ ಅಲ್ಲ; ಗುಡಿಸಲು ಕಟ್ಟಿ ಅನ್ನ ಬೆಳೆಯುವ ಮೂಲಕ; ನಮ್ಮ ಆಂತರಿಕ ಸತ್ಯವನ್ನು ಕಂಡುಕೊಂಡು, ಆಧ್ಯಾತ್ಮಿಕ ಮೌಲ್ಯಗಳಿಂದ ಬದುಕಿನ ಸಮತೋಲನಕ್ಕೆ ಮರಳುವ ಮೂಲಕ.

ಯಾವ ರೀತಿ ನೋಡಿದರೂ, ಈ ಭೂಮಿ, ಈ ನೆಲ, ಈ ಮಣ್ಣು ಮಾನವನಿಗೆ ದೊರೆತ ಅತ್ಯುತ್ಕೃಷ್ಟವಾದ ವರದಾನ. ಭೂಮಾತೆ ನಮಗೆ ನೀಡುವ ಮಣ್ಣು, ನೀರು, ಗಾಳಿ ಇನ್ನೆಲ್ಲೂ ಲಭಿಸಲಾಗದ ಜೀವದಾನವನ್ನೇ ನೀಡುತ್ತಿವೆ. ಪ್ರತಿಕ್ಷಣ ಉಸಿರಾಡುವಾಗಲೂ ನಾವು ಈ ಸತ್ಯವನ್ನು ನೆನಪಿಸಿಕೊಳ್ಳಬೇಕು: 'ಒಂದು ಬಾರಿ ಕಳೆದುಕೊಂಡರೆ ಮತ್ತೆಂದೂ ಇದನ್ನು ಪಡೆಯಲಾರೆವು; ಹಾಗಾಗಿ ಮತ್ತೆ 'ಮಣ್ಣಿ'ಗೆ ಮರಳೋಣ.' *


### ಜುಲೈ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೬ | ಭಾನುವಾರ | ಏಕಾದಶಿ |
| ೧೦ | ಗುರುವಾರ | ಗುರುಪೂರ್ಣಿಮಾ |
| ೨೧ | ಸೋಮವಾರ | ಏಕಾದಶಿ |
| ೨೨ | ಮಂಗಳವಾರ | ಸ್ವಾಮಿ ರಾಮಕೃಷ್ಣಾನಂದ ಜಯಂತಿ |

# ಗುರುವಾಕ್ಯ



✤ **ಗುರುವಾಕ್ಯದಲ್ಲಿ** ವಿಶ್ವಾಸವಿಡಬೇಕು. ಗುರುವೇ ಸಚ್ಚಿದಾನಂದ, ಸಚ್ಚಿದಾನಂದನೇ ಗುರು. ಆತನ ಮಾತಿನಲ್ಲಿ ವಿಶ್ವಾಸವಿಟ್ಟರೆ , — ಬಾಲಕನ ಹಾಗೆ ವಿಶ್ವಾಸವಿಟ್ಟರೆ, — ಭಗವಂತ ದೊರೆತುಬಿಡುತ್ತಾನೆ. ಬಾಲಕನದು ಎಂಥ ವಿಶ್ವಾಸ! ಒಬ್ಬನನ್ನು ತೋರಿಸಿ ತಾಯಿ ಮಗುವಿಗೆ ಹೇಳಿದರೆ, 'ಆತ ನಿನ್ನ ಅಣ್ಣನಾಗ ಬೇಕು' ಅಂತ, ಒಡನೆಯೇ ಅದು ನಂಬುತ್ತದೆ. ಆತ ತನ್ನ ಅಣ್ಣ ಅಂತ. *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು. ೧೨೭-೨೮)*



✤ **ಸಚ್ಚಿದಾನಂದನೇ** ಗುರು ರೂಪ ಧರಿಸಿ ಬರುತ್ತಾನೆ. ಮನುಷ್ಯ ಗುರುವಿನಿಂದ ದೀಕ್ಷೆಯನ್ನು ಪಡೆದ ವ್ಯಕ್ತಿ. ಆತನನ್ನು ಕೇವಲ ಮನುಷ್ಯ ಅಂತ ಭಾವಿಸಿದ್ದೇ ಆದರೆ, ಆ ದೀಕ್ಷಿತನಿಗೆ ಯಾವ ಉನ್ನತಿಯೂ ಉಂಟಾಗದು. ಆತನನ್ನು ಸಾಕ್ಷಾತ್ ಭಗವಂತನೇ ಎಂಬುದಾಗಿ ಭಾವಿಸಿದರೆ ತಾನೆ ದೀಕ್ಷಿತನಿಗೆ ಮಂತ್ರದಲ್ಲಿ ಶ್ರದ್ಧೆಯುಂಟಾಗುವುದು. ಶ್ರದ್ಧೆಯೊಂದು ಉಂಟಾಯಿತು ಎಂದರೆ ಎಲ್ಲಾ ದೊರೆತ ಹಾಗೆಯೇ. ಕೆಳಜಾತಿಯ ಏಕಲವ್ಯ ದ್ರೋಣನ ಮಣ್ಣಿನ ಪ್ರತಿಮೆಯನ್ನು ಕಾಡಿನಲ್ಲಿ ಮುಂದಿಟ್ಟುಕೊಂಡು ಧನುರ್ವಿದ್ಯೆಯಲ್ಲಿ ಪಾರಂಗತನಾದ. ದ್ರೋಣನ ಮಣ್ಣಿನ ಪ್ರತಿಮೆಯನ್ನೇ ಸಾಕ್ಷಾತ್ ದ್ರೋಣನೆಂದು ಭಾವಿಸಿ ಆತ ಅದನ್ನು ಪೂಜಿಸುತ್ತಿದ್ದ. ಅದಕ್ಕಾಗಿಯೇ ಆತ ಧನುರ್ವಿದ್ಯೆಯಲ್ಲಿ ಸಿದ್ಧಪುರುಷನಾದ. *(ಅಲ್ಲೇ, ಪು. ೨೭೬)*



✤ **ಒಬ್ಬ** ಗುರು ತನ್ನ ಶಿಷ್ಯನಿಗೆ ಹೇಳಿದ: 'ಪ್ರತಿಯೊಂದು ಶರೀರದಲ್ಲೂ ರಾಮನೇ ಇದ್ದಾನೆ, ಎಂಬುದಾಗಿ. ಶಿಷ್ಯನಿಗೆ ಅದರಲ್ಲಿ ಪೂರ್ಣ ಶ್ರದ್ಧೆಯುಂಟಾಯಿತು. ಒಂದು ದಿನ ನಾಯಿಯೊಂದು ಆತನ ಕೈಯಿಂದ ರೊಟ್ಟಿಯನ್ನು ಕಿತ್ತುಕೊಂಡು ಓಡಲಾರಂಭಿಸಿತು. ಆಗ ಶಿಷ್ಯ ತುಪ್ಪದ ಭರಣಿಯನ್ನು ಕೈಯಲ್ಲಿ ಹಿಡಿದು ಅದರ ಹಿಂದೆ ಓಡುತ್ತಾ ಕೂಗಲಾರಂಭಿಸಿದ. 'ಎಲೋ ರಾಮಾ, ಒಂದು ನಿಮಿಷ ನಿಲ್ಲೋ. ರೊಟ್ಟಿಗೆ ಇನ್ನೂ ತುಪ್ಪ ಸವರಿಲ್ಲ ಕಣೋ!'

*(ಅಲ್ಲೇ, ಪು. ೨೭೮)*



✤ **ಭಕ್ತ** : ಮಹಾಶಯರೆ, ಮಾರ್ಗವೇನು?

**ಶ್ರೀರಾಮಕೃಷ್ಣರು:** ಗುರುವಾಕ್ಯದಲ್ಲಿ ಶ್ರದ್ಧೆ. ಗುರುವಿನ ಉಪದೇಶವನ್ನು ಅನುಕ್ರಮವಾಗಿ ಆಚರಿಸಿದರೆ ಭಗವಂತನ ಸಾಕ್ಷಾತ್ಕಾರ ದೊರೆತುಬಿಡುತ್ತದೆ. ಇದು ದಾರವನ್ನು ಅನುಸರಿಸಿ ಕೊನೆಗೆ ವಸ್ತುವನ್ನು ಮುಟ್ಟುವ ಹಾಗೆ.



*(ಅಲ್ಲೇ, ಪು. ೫೬೦)*

**'ಶ್ರೀರಾಮಕೃಷ್ಣ ವಚನವೇದ'ದಿಂದ**

# ಶ್ರೀಮಾತೆಯವರು : ನಾನು ಕಂಡಂತೆ

ಬಂಗಾಳಿ ಮೂಲ : **ಸ್ವಾಮಿ ಭೂಮಾನಂದ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ಭಾಗ ೨**

ಒಂದು ದಿನ ಒಬ್ಬ ಭಿಕಾರಿ ಬಂದು ಹಾಡತೊಡಗಿದ:

ಏನು ಸಂತಸದ ಸುದ್ದಿ! ಕಾಶಿಧಾಮದಿ ನೀನು
ಅನ್ನಪೂರ್ಣೆಯು ಎನಿಸಿ ಮೆರೆಯುತಿಹೆಯಂತೆ !
ಹೇಳು ಉಮೆ, ಇದು ನಿಜವೆ ಜನರಾಡುವೀ ಮಾತು?
ಅಂದು ನೀ ಶಿವನ ಕರ ಪಿಡಿದಾಗ, ಶಂಕರೀ
ಮುಷ್ಟಿ ಅನ್ನಕೆ ಅವನು ಅಲೆವ ಕಡು ಭಿಕಾರಿ.
ಇಂದವನು ಜಗದೀಶ, ನೀನು ವಿಶ್ವೇಶ್ವರಿ
ವಾಮಪಾರ್ಶ್ವದಿ ಅವನ ಬೆಳಗುತಿಹೆಯಂತೆ !
ಹುಚ್ಚು ಶಿವ, ದಿಗಂಬರ, ಎಂಬ ಮಾತನು ಕೇಳಿ
ಎಷ್ಟು ನೊಂದೆನು ನಾನು! ಅದನೆಂತು ಹೇಳಲಿ?
ಇಂದವನ ದರುಶನಕೆ ಕಾದಿಹರು ಬಾಗಿಲಲಿ
ಇಂದ್ರ,ಚಂದ್ರರು, ಮತ್ತೆ ಯಮನವನ ಆಣತಿಗೆ!
ಗಿರಿಶಿಖರದಲ್ಲಿದ್ದ, ತಿರಿದುಂಡು ಬದುಕಿದ್ದ;
ಇಂದವನ ನೋಡಿದರೆ ಕುಬೇರಗೂ ಬೆರಗು,
ಇನಿತು ಸಂಪದ ಇವಗೆ ಬಂದುದೆಲ್ಲಿಂದೆಂದು !
ಇದು ನಿನ್ನ ಕೈಹಿಡಿದ ಫಲವೇನು? ಹೇಳು.
ಶಂಕರಿಯ ಐಸಿರಿಯು ಮಿತಿಮೀರಿತೆನಿಸುವುದು
ಇಲ್ಲವಾದರೆ ಗೌರಿಗೇಕಿಂತು ಗರ್ವವಲಾ?
ತನ್ನ ಮಗ ರಾಧಿಕನ[1] ಕರೆಗೆ ಕಿವಿಗೊಡದೆಯೆ
ಎತ್ತಲೋ ಮುಖಮಾಡಿ ಕುಳಿತಿಹಳು ತಾಯಿ.

ಶ್ರೀಮಾತೆಯವರು ದೊಡ್ಡ ಮಾವನ ಮನೆಯಲ್ಲಿ ವಾಸ ಮಾಡುತ್ತಿದ್ದರು. ಆ ಮನೆಯ ಬಾಗಿಲ ಪಕ್ಕದಲ್ಲಿ ನಿಂತು ಶ್ರೀಮಾತೆ ಆ ಹಾಡನ್ನು ಆಲಿಸುತ್ತಿದ್ದರು. ಹಾಡನ್ನು ಶ್ರೀಮಾತೆಯವರು ತಮಗೇ ಚೆನ್ನಾಗಿ ಹೊಂದಿಕೆಯಾಗುವಂತೆ ಭಾವಿಸಿಕೊಂಡಿರಬೇಕು. ಶ್ರೀರಾಮಕೃಷ್ಣರನ್ನು ಹಳ್ಳಿಯ ಜನರೆಲ್ಲ 'ಹುಚ್ಚ' ಎಂದು ಕರೆಯುತ್ತಿದ್ದರು. ಹಾಡನ್ನು ಕೇಳಿ ಶರತ್ ಮಹಾರಾಜರಿಗೆ ತುಂಬ ಆನಂದವುಂಟಾಯಿತು. 'ಇಂತು ಗರ್ವವಲಾ?' ಎಂಬ ಸಾಲನ್ನು ನಗುತ್ತಾ ಉಚ್ಚರಿಸಿ, ಸುಮ್ಮನಿದ್ದುಬಿಟ್ಟರು. ಬಳಿಕ ಅವರು, ''ಈ ಹಾಡನ್ನು ಇದಕ್ಕೂ ಮೊದಲೇ ಜಯರಾಮಬಾಟಿಯಲ್ಲಿ ಕೇಳಿದ್ದೆ'' ಎಂದರು. ದಾಶರಥಿ ರಾಯ್ ಕವಿಯ ಹಾಡು ಅದು. ಯಾರೋ ಒಬ್ಬನು 'ರಾಧಿಕ' ಎಂಬ ತನ್ನ ಅಜ್ಞಾತ ಅಂಕಿತನಾಮವನ್ನು ಅಲ್ಲಿ ಹಾಕಿಬಿಟ್ಟಿದ್ದಾನೆ. ಮುದ್ರಿತವಾದ ಪ್ರತಿಯೊಂದರಲ್ಲಿ ಹಾಡಿನ ವಿವರಣೆಯಲ್ಲಿ 'ದಾಶರಥಿಯ ಹೆಸರನ್ನು ಕೇಳಿ ಮುಖ ತಿರುಗಿಸಿ ಕುಳಿತಿಹಳು' ಎಂದು ಇದ್ದುದನ್ನು ನಾವು ನೋಡಿದ್ದೇವೆ.



ಒಂದು ದಿನ ಜಮೀನನ್ನು ಅಳೆಯುವ ಕೆಲಸ ಆರಂಭವಾಯಿತು. ಈ ಬಾರಿ ದಾಖಲಾತಿಗಳೊಂದಿಗೆ ಜಮೀನಿನ ಅಳತೆ ಇತ್ಯಾದಿ ನಡೆಯಲಿತ್ತು. ಎಲ್ಲ ದಾಖಲೆಗಳೂ ಕಾಳೀಮಾಮನ ಬಳಿ ಇದ್ದವು. ಅವನ್ನೆಲ್ಲಾ ಅವರು ಇಟ್ಟುಕೊಂಡು ಕುಳಿತಿದ್ದರು. ದಾಖಲೆಗಳನ್ನೆಲ್ಲ ತಾವೇ ಇಟ್ಟುಕೊಳ್ಳಬೇಕು ಎಂಬುದು ದೊಡ್ಡ ಮಾವನ ಅಭಿಪ್ರಾಯವಾಗಿತ್ತು, ಇದಕ್ಕೆ ಕಾಳೀಮಾಮ ಒಪ್ಪುತ್ತಿಲ್ಲ. ಆಸ್ತಿ ಭಾಗ ಮಾಡುವುದಕ್ಕಾಗಿ ಅಂದು ಮಹಾರಾಜ್ ಕಾಳೀಮಾವನ ಮನೆಯಲ್ಲಿ ಕುಳಿತಿದ್ದರು. ಇದ್ದಕ್ಕಿದ್ದಂತೆ ಅವರು ಅಲ್ಲಿಂದ ಮರಳಿ ಬರುತ್ತಿದ್ದುದು ಕಂಡುಬಂತು. ನಾನು ಎದ್ದು, ಅವರ ಬಳಿಗೆ ಓಡಿಹೋದೆ. ಅವರು ಪಿಸುಗುಟ್ಟುತ್ತ ನನಗೆ ಹೇಳಿದರು: ''ನನ್ನೊಂದಿಗೆ ಬಾ. ತುಂಬ ಜಾಗ್ರತೆಯಿಂದ ಇರಬೇಕು. ನಾನು ಏನು ಹೇಳುತ್ತೇನೋ ಹಾಗೆ ಮಾಡಬೇಕು.'' ''ಸರಿ, ಹೋಗೋಣ'' ಎನ್ನುತ್ತ ನಾನು ಅವರೊಂದಿಗೆ ಹೋದೆ. ಅವರು ಮನೆಯ ಉತ್ತರ ದಿಕ್ಕಿಗಿದ್ದ ವರಾಂಡಕ್ಕೆ ಹೋಗಿ, ಒಂದು ಚಾಪೆಯ ಮೇಲೆ ಕುಳಿತರು. ನಾನು ದೊಡ್ಡ ಮಾವನ ಬಳಿ ನಿಂತೆ – ಮಹಾರಾಜ್ ನನಗೆ ಕುಳಿತುಕೊಳ್ಳಲು ಹೇಳಲಿಲ್ಲ. ಒಂದು ಬಾರಿ ಅವರು ನನ್ನತ್ತ ನೋಡಿದರು, ಅಷ್ಟೆ. ಕಾಳೀಮಾವ ಒಂದು ಕಬ್ಬಿಣದ ಪೆಟ್ಟಿಗೆಯನ್ನು ತಂದು, ಅದನ್ನು ತೆರೆದು ಅದರೊಳಗಿದ್ದ ದಾಖಲೆ

[1] ಇದು ಬಂಗಾಳಿಯ ಆಗಮನೀ ಸಂಗೀತದಲ್ಲಿ 'ಕೀ ಆನಂದೇರ್ ಕಥಾ ಉಮೇ' ಎಂಬ ಹಾಡಿನ ಕನ್ನಡರೂಪ. *('ಶ್ರೀಮಾತೆ ಶಾರದಾದೇವಿ' ಸ್ವಾಮಿ ನಿತ್ಯಸ್ಥಾನಂದ, ೨೦೧೮, ಪು.೧೧೬)*